# ಆಹಾ ಸುದ್ದಿ!

★ ಸಸಿತೋಟ



ಅಜ್ಮೇರ್‌ನಲ್ಲಿ ವ್ಯಕ್ತಿಯೊಬ್ಬನ ವಿಶಿಷ್ಟ ಪ್ರದರ್ಶನವಿದು. ಕಣ್ಣಿಗೇ ಕೈ ಹಾಕುವುದು ಎಂಬ ಆಡುನುಡಿಗೆ ನಿಜವಾದ ಅರ್ಥವನ್ನು ಬಿಂಬಿಸುತ್ತಿದ್ದಾನೆ.

ಕೆನಡಾದ ಜೋರ್ಡಾನ್ ತನ್ನ ಪ್ರೇಯಸಿ ಎಲಿಜಬೆತ್ ಗಲ್ಲಾಗರ್ ಜೊತೆ ವಿಶ್ವ ಪರ್ಯಟನೆಗೆ ವಿಮಾನ ಟಿಕೆಟ್ ಬುಕ್ ಮಾಡಿದ್ದ. ಅಷ್ಟರಲ್ಲೇ ಇಬ್ಬರಿಗೂ ಜಗಳವಾಗಿ ದೂರಾದರು. ಟಿಕೆಟ್‌ನಲ್ಲಿ ಹೆಸರನ್ನು ಬದಲಾಯಿಸುವುದು ಕಷ್ಟ. ಹೀಗಾಗಿ ಹಳೆಯ ಪ್ರೇಯಸಿಯ ಹೆಸರಿನವರು ಸಂಪರ್ಕಿಸಬಹುದು ಎಂದು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದ ಪೋಸ್ಟ್‌ಗೆ ನೂರಾರು ಪ್ರತಿಕ್ರಿಯೆ ಸಿಕ್ಕಿದ್ದು, ಒಬ್ಬಳನ್ನು ಆಯ್ಕೆ ಮಾಡಿಕೊಂಡಿದ್ದಾನಂತೆ. ಪತ್ನಿಯನ್ನೂ ಹೀಗೆ ಬದಲಾಯಿಸಿಕೊಳ್ಳಬಹುದಾಗಿದ್ದರೆ...!



ಡಿಸ್ಕವರಿ, ನ್ಯಾಷನಲ್ ಜಿಯಾಗ್ರಫಿಗಾಗಿ ನೀರಿನಡಿ ಸಾಹಸಪಟ್ಟು ವಿಡಿಯೋ ತೆಗೆದರೆ, ಶಾಂಘೈನಲ್ಲಿ ನೀರಿನಡಿ ಕಾಣುವಂತೆ ಚಿತ್ರಗಳನ್ನು ತೆಗೆಯುವ ಸ್ಟುಡಿಯೊ ಪ್ರಸಿದ್ಧವಾಗಿದೆ. ಮದುವೆಗೆ ಮುನ್ನ ಇಂತಹ ಚಿತ್ರಗಳನ್ನು ತೆಗೆಸಿಕೊಳ್ಳುವುದರಿಂದ ಇದಕ್ಕೆ 'ಮಿಸ್ಟರ್ ವೆಡ್ಡಿಂಗ್' ಎಂಬ ಹೆಸರೇ ಕಾಯಂ ಆಗಿದೆಯಂತೆ. ಮದುವೆ ಮಾಡಿದಂತೆ ಕಾಣುವ ಚಿತ್ರಗಳನ್ನು ಕೂಡಾ ತೆಗೆಯುವವರಿರಬಹುದು.



ಬೋಸ್ನಿಯಾದ ವಧುವಿನ ವರ್ಣರಂಜಿತ ಮುಖ. ಹಿರಿಯ ಮಹಿಳೆಯರು ದಿನಗಟ್ಟಲೆ ಶ್ರಮವಹಿಸಿ ವಧುವಿನ ಮುಖಕ್ಕೆ ಬಣ್ಣ ಬಳಿಯುತ್ತಾರಂತೆ. ಕೆಲವರು ಬಣ್ಣ ಬಳಿಯುವುದು ಚೆಂದ ಕಾಣಲಿಕ್ಕಾದರೆ, ಬೋಸ್ನಿಯಾದಲ್ಲಿ ಸೌಂದರ್ಯವನ್ನು ಹಾಳು ಮಾಡಲಿಕ್ಕೇ ಈ ಮೇಕಪ್ ಇರಬಹುದು. ವಧುವಿನ ಮೇಲೆ ಅಸೂಯೆ ಇದ್ದವರು ಈ ಸಂದರ್ಭ ಬಳಸಿಕೊಳ್ಳಬಹುದು.

ಉತ್ತರ ಕೊರಿಯಾದಲ್ಲಿ ಕಿಮ್ ಜಾಂಗ್ ಉನ್ ಹೆಸರುಳ್ಳವರು ಅದನ್ನು ಬದಲಾಯಿಸುವ ತಲೆನೋವು ಅನುಭವಿಸುತ್ತಿದ್ದಾರೆ. ಅದು ಆ ದೇಶದ ಮುಖಂಡನ ಹೆಸರು. ಬೇರೆ ಯಾರೂ ಅದನ್ನು ಇಟ್ಟುಕೊಳ್ಳುವಂತಿಲ್ಲ, ಇಟ್ಟುಕೊಂಡಿದ್ದರೂ ಬದಲಾಯಿಸಿಕೊಳ್ಳಬೇಕು ಎಂಬ ಸರ್ಕಾರಿ ಆದೇಶ ಹೊರಬಿದ್ದಿದೆ. ಕಿಮ್ ಕೇಶಶೈಲಿಯನ್ನು ಯಾರೂ ವಿನ್ಯಾಸ ಮಾಡಿಕೊಳ್ಳುವಂತಿಲ್ಲ ಎಂಬುದರ ಬೆನ್ನ ಹಿಂದೆ ಈ ಆದೇಶ ಹೊರಬಿದ್ದಿದ್ದು, ಆತ ಏನೇನು ತಿನ್ನುತ್ತಾನೋ ಅವುಗಳನ್ನೂ ತಿನ್ನುವಂತಿಲ್ಲ, ಆತ ಎಲ್ಲೆಲ್ಲಿ ನಡೆಯುತ್ತಾನೋ ಅಲ್ಲಿ ಬೇರೆಯವರು ನಡೆಯುವಂತಿಲ್ಲ ಎಂಬ ಆದೇಶ ಹೊರಬಿದ್ದರೂ ಅಚ್ಚರಿ ಪಡಬೇಕಾಗಿಲ್ಲ.



ಅಂತ್ಯ ಸಂಸ್ಕಾರದ ನಂತರ ಬೂದಿಯನ್ನು ಬಾಹ್ಯಾಕಾಶಕ್ಕೆ ಕಳಿಸುವ ಸುದ್ದಿ ಕೇಳಿದ್ದೀರಾ. ಅದೀಗ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿದೆ. ಬೂದಿ ಅಲ್ಲಿಗೆ ತಲುಪಿದ್ದನ್ನು ಖಚಿತಪಡಿಸುವ ಚಿತ್ರಗಳೂ ಈಗ ಲಭ್ಯ. ಬಿಸಿ ಬಲೂನಿಗೆ ಕ್ಯಾಮೆರಾ ಸಿಕ್ಕಿಸಿ ಬಾಹ್ಯಾಕಾಶದಲ್ಲಿ ಬೂದಿ ಚದುರುವ ಚಿತ್ರಗಳನ್ನು ಕೆಳಗಿರುವ ಸಂಬಂಧಿಕರು ನೋಡಿ ಧನ್ಯರಾಗಬಹುದು. ಇದು ಸದ್ಯ ನ್ಯೂಮೆಕ್ಸಿಕೊ, ಕೊಲರಡೋದಲ್ಲಿ ಲಭ್ಯ. ಸತ್ತಿದ್ದಕ್ಕೇ ಸಾಕ್ಷಿ ಕೇಳುವಾಗ ಬೂದಿಗೆ ಸಾಕ್ಷಿ ಕೇಳುವುದರಲ್ಲಿ ತಪ್ಪಿಲ್ಲ ಬಿಡಿ.